

# ಮಾಗುತ್ತಿರುವ ಜೋಳದಂಥ ಗಮಲು

ಹೊಳೆಯನೆದುರುಗೊಳ್ಳಲು ನೀನು ಹರಿಯುತ್ತ
ಸಾಗುವುದನು
ನೋಡುವುದು ನನಗಿಷ್ಟ

ನೀನು, ಮಳೆಹನಿ
ಮುಳುಗೇಳು ಹೊಳೆಯೊಳಗೆ

ಮಾಗುತ್ತಿರುವ ಜೋಳದಂತೆ ಗಮಗಮ ನೀನು
ಹರಡುತ್ತಿದೆ ಆ ಗಮಲು ಗಾಳಿ ಕೂಡಿ ಆಡಿ

ಹೋಗು ಹೋಗೇ ಹೊಳೆಯೊಳಗೆ

ಮೂಡಣಕೆ ಚಲಿಸುವನು ಸೂರ್ಯ
ಪಡುವಣಕೆ ತೆರಳುವರು ಮಂದಿ

ನೀನು ಮುಳುಗೇಳು ಹೊಳೆಯಲ್ಲಿ,
ನಾನು ಹಂಬಲಿಸಿದಂತೆಯೇ
ಒದ್ದೆಮುದ್ದೆ ನೀನು

ಹಾಗೇ ಹೊರ ಬಾ ನೀರೊಳಗಿಂದ, ಹಾಗೇ
ಒದ್ದೆಮುದ್ದೆ
ಆ ನಿನ್ನ ಬೆರಳುಗಳೋ ಘಂ...ಗಮ
ಮಾಗುಜೋಳದ ಹಾಗೆ
ಕಾಪಿಡುವೆ ಅವನ್ನು ನನ್ನ ಕಣಜದೊಳಗೆ

ಮೂಡಣಕೆ ಮಂದಿ
ಪಡುವಣಕೆ ಸೂರ್ಯ ತಿರುಗುವವರೆಗೆ
ಪ್ರೀತಿಸುವೆ ನಾ ನಿನ್ನ

ಬಾ, ಮಾಗೋಣ ಎಚ್ಚರದಲ್ಲಿ
ಆ ಸೂರ್ಯನ ಹಾಗೆ.

(ಅಸ್ಸಾಮಿಯಿಂದ ಇಂಗ್ಲಿಷ್‌ಗೆ: ಪ್ರದೀಪ್ ಆಚಾರ್ಯ)